ಶ್ರೀ ಬಿ. ಇ. ರಾಮಯ್ಯ.—ಇಲ್ಲಿ ತಾವು ತಾರೀಖು ೨೯ನೇ ಡಿಸೆಂಬರ್ ೧೯೭೫ ರಂದು ಗ್ರೋಯರ್ಸ್‌ಯಿಂದ ಲೆವಿ ಕಲೆಕ್ಟ್ ಮಾಡಿದ್ದು ೧೬೬೨ ಟನ್ಸ್ ಎಂದು ಹೇಳಿದ್ದೀರಿ, ತಮಗೆ ತಿಳಿದಿರುವಂತೆ ಈ ಸೀಜನ್ಸ್ ಕಮೆನ್ಸ್ ಆಗುವುದು ನವೆಂಬರ್, ಡಿಸೆಂಬರ್, ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ; ತಾರೀಖು ೨೯ನೇ ಡಿಸೆಂಬರ್ ೧೯೭೫ ರಂದು ಲೆವಿ ಕಲೆಕ್ಟ್ ಆಗಿರುವುದು ೧೬೬೨ ಕ್ವಿಂಟಾಲ್, ಈ ರೀತಿ ಇದ್ದರೂ ಸಹ ತಾವು ಎರಡು ತಿಂಗಳ ಕಾಲ ಟ್ರಾನ್ಸ್ ಪೋರ್ಟ್ ಪರ್ಮಿಟ್ ಕೊಡಿರಲು ಕಾರಣವೇನು?

ಶ್ರೀಮತಿ ಇ. ಇ. ವಾಜ್,—ಟ್ರಾನ್ಸ್‌ಪೋರ್ಟ್ ಪರ್ಮಿಟ್ ಕೊಟ್ಟರೆ ಭತ್ತವೆಲ್ಲಾ ಬೇರೆ ಜಿಲ್ಲೆಗಳಿಗೆ ಹೋಗಿ ಗ್ರೋಯರ್ಸ್ ಲೆವಿ ಕಲೆಕ್ಟ್ ಮಾಡುವುದು ಕಷ್ಟವಾಗಬಹುದೆಂದು ಕೊಂಡು ಇದನ್ನು ನಿಲ್ಲಿಸಲಾಗಿತ್ತು, ಈಗ ಭತ್ತವನ್ನು ಪಾಸ್ಸಾನು ಮಾಡಿರುವುದರಿಂದ ಮತ್ತೆ ಪರ್ಮಿಟ್ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ಈ ಎರಡು ತಿಂಗಳ ಕಾಲ ಪರ್ಮಿಟ್ ಕೊಡುವುದನ್ನು ನಿಲ್ಲಿಸಿದ್ದರಿಂದ ವ್ಯಾಪಾರಗಾರರಿಗೆ ಲಾಭವಾಯಿತು ಮತ್ತು ರೈತರಿಗೆ ನಷ್ಟವಾಯಿತು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಇ. ಇ. ವಾಜ್.—ಇಲ್ಲಿ ರೈತರಿಗೆ ನಷ್ಟವಾಗುವ ಪ್ರಶ್ನೆಯೇ ಇಲ್ಲ, ರೈತರು ಗ್ರೋಯರ್ಸ್ ಲೆವಿ ಕೊಟ್ಟೇ ತೀರಬೇಕು, ಆದರೆ ಕೆಲವರು ಸರ್ಕಾರಕ್ಕೆ ಕೊಡತಕ್ಕಂತಹ ಲೆವಿ ಕೊಡುವುದಕ್ಕೆ ಮೊದಲೇ ವ್ಯಾಪಾರಗಾರರಿಗೆ ಭತ್ತ ವ್ಯಾಪಾರ ಮಾಡಲು ಪ್ರಾರಂಭ ಮಾಡುತ್ತಾರೆ. ಈ ಕಾರಣದಿಂದ ಇದನ್ನು ಕೆಲವು ಕಾಲ ನಿಲ್ಲಿಸಬೇಕಾಗಿ ಬಂತು.

ಶ್ರೀ ಬಿ. ಇ. ರಾಮಯ್ಯ.—'ಡಿ' ಪರ್ಮಿಟ್ ಇಲ್ಲದೆ ಡಿ. ಸಿ. ಅವರು ಟ್ರಾನ್ಸ್‌ಪೋರ್ಟ್ ಪರ್ಮಿಟ್ ಕೊಡುವುದಿಲ್ಲ ಎಂಬುದು ತಮಗೆ ಗೊತ್ತಿದೆಯೇ?

ಶ್ರೀಮತಿ ಇ. ಇ. ವಾಜ್.—ಲೆವಿ ಎಷ್ಟು ಕೊಟ್ಟಿದ್ದಾರೆ ಮತ್ತು ಅದರ ಹತ್ತಿರ ಇನ್ನು ಎಷ್ಟು ಕ್ವಿಂಟಾಲ್ ಭತ್ತ ಉಳಿದಿದೆ ಎಂಬ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಕೊಡ ಬೇಕಾಗುತ್ತದೆ.

ಅಧ್ಯಕ್ಷರು —ಮಾನ್ಯ ಕಾಗೋಡು ತಿಮ್ಮಪ್ಪ ನವರ ಕಾಲಿಂಗ್ ಅಟೆಂಷನ್ ನೋಟೀಸನ್ನು ಸಂಬಂಧ ಪಟ್ಟ ಮಂತ್ರಿಗಳು ಕೇಳಿ ಲ್‌ಗೆ ಹೋಗಬೇಕಾಗಿದೆ ಎಂದು ತಿಳಿಸಿರುವುದರಿಂದ ನಾಳೆ ತೆಗೆದುಕೊಳ್ಳುತ್ತೇನೆ'

Notices under Rule 312

(i) re. Grant of amnesty to prisoners of the 2500th years of Mahavir Jayanthi.

ಶ್ರೀ ಟಿ. ಆರ್. ಶಾಮಣ್ಣ —ಕೋಟೆ ಮಾನ್ಯ ಅಧ್ಯಕ್ಷರೇ, ನಾನು ೩೧೨ನೇ ರೂಲ್ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಏನೆಂದರೆ, ಸರ್ಕಾರದವರು ಮಹಾವೀರ ಜಯಂತಿ ಸಂದರ್ಭದಲ್ಲಿ ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಿದ್ದರು. ಅದು ಈ ರೀತಿ ಇದೆ.—

"Proceedings of the Government of Karnataka Grant of Amnesty to Prisoners on the occassion of the 2500th Year of Mahavir Jayanthi.

Order No. HD 198 dated 6th January 1975.

(1) Prisoners suffering dangerously from cancer, leprosy or TB should be released on issue of certificate from the District Surgeon concerned.

All Blind prisoners should be released."

Then the letter from the District Surgeon, Bangalore-1 addressed to the Superdent Central Jail, dated 29th March 1975 is as follows:

> In all, the following 19 prisoners are identified to be suffering from Cancer, Leprosy T.B, and Blindness at various stages of the disease. Out of 13 suffering from T. B. 8 have been recommended to be considered for release.
>
> As regards 2 blind prisoners, (1) Peddanna (2) Babu Rao, they are recommended to be considered for release.
>
> As regards Nos. 17, 13 & 14 in the list no evidence to show that they are suffering from T. B.
>
> No. 16 Peddanna is recommended to be sent to Aligarh for treatment. Nowhere else is there scope for cure."

೨೦೦ ವರ್ಷದ ಮಹಾವೀರ ಜಯಂತಿ ಪ್ರಯುಕ್ತ ಸರ್ಕಾರದವರು ಈ ರೀತಿಯಾಗಿ ಒಂದು ಆಜ್ಞೆಯನ್ನು ಹೊರಡಿಸಿ ಯಾರಿಗೆ ಗುಣವಾಗದೇ ಇರತಕ್ಕಂಥ ಕಾಯಿಲೆ ಇದೆಯೋ ಯಾರಿಗೆ ಘೋರವಾದಂಥ ಕಾಯಿಲೆ ಇದೆಯೋ, ಅಂತಹವರನ್ನು ಡಿಸ್ಪ್ರಿಕ್ಟ್ ಸರ್ಜನ್ ಅವರ ಶಿಫಾರಸ್ ಮೇರೆಗೆ ಬಿಡುಗಡೆ ಮಾಡಬೇಕೆಂದು ಆಜ್ಞೆ ಹೊರಡಿಸಿದ್ದರೂ ಸಹ ಬಿಡುಗಡೆ ಮಾಡಿಲ್ಲ. ಬೇರೆ ಜೈಲುಗಳ ವಿಚಾರ ನನಗೆ ತಿಳಿದಿಲ್ಲ, ಆದರೆ ಬೆಂಗಳೂರು ಸೆಂಟ್ರಲ್ ಜೈಲ್ ವಿಚಾರ ನನಗೆ ಗೊತ್ತಿದೆ. ಅದರಂತೆ ೮ ಜನ ಖೈದಿಗಳು ಟಿ. ಬಿ. ಯಿಂದ ನರಳುತ್ತಿದ್ದಾರೆ; ಮತ್ತು ಇಬ್ಬರಿಗೆ ಕಣ್ಣು ಕಾಣದ ಪ್ರಯುಕ್ತ ತಕ್ಷಣ ಬಿಡುಗಡೆ ಮಾಡಬೇಕೆಂದು ಡಿಸ್ಪ್ರಿಕ್ಟ್ ಸರ್ಜನ್ ಅವರು ಶಿಫಾರಸ್ ಮಾಡಿದ್ದರೂ ಸಹ ಇನ್ನೂ ಬಿಡುಗಡೆ ಮಾಡದಿರಲು ಕಾರಣವೇನು? ಕೆಲವು ತಪ್ಪಿತಸ್ಥರು ೫-೬ ವರ್ಷಗಳಿಂದ ಶಿಕ್ಷೆಯನ್ನು ಜೈಲಿನಲ್ಲಿ ಅನುಭವಿಸುತಿದ್ದರೂ ಮತ್ತು ಅವರುಗಳು ಕಾಯಿಲೆಯಿಂದ ನರಳುತ್ತಿದ್ದರೂ ಸಹ ಇಲ್ಲಿಯವರೆಗೆ ಅಂದರೆ ಈ ಆಜ್ಞೆ ಹೊರಡಿಸಿ ಒಂದು ವರ್ಷ ಕಳೆದಿದ್ದರೂ ಸಹ ಬಿಡುಗಡೆ ಮಾಡದಿರಲು ಕಾರಣವೇನು? ಇದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಎಂಬ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸರ್ಕಾರ ಹೊರಡಿಸಿರತಕ್ಕಂಥ ಹುಕುಂ ಪ್ರಕಾರ ಯಾರು ಯಾರನ್ನು ಬಿಡುಗಡೆ ಮಾಡಬಹುದೋ ಅಂತಹವರನ್ನು ಬಿಡುಗಡೆ ಮಾಡಲು ಸರ್ಕಾರ ಸಿದ್ಧವಾಗಿದೆ. ಆದರೆ ಸರ್ಕಾರದ ಹುಕುಂಅನ್ನು ಸಂಪೂರ್ಣವಾಗಿ ಪರಿಪಾಲನೆ ಮಾಡದೆ ಬಿಡುಗಡೆ ಮಾಡುವುದು ಕಷ್ಟವಾಗುತ್ತದೆ. ಈಗ ತಾವು ಹೇಳಿರತಕ್ಕಂಥ ಅಂಶಗಳಲ್ಲಿ ಸ್ವಲ್ಪ ಅರ್ಥ ವ್ಯತ್ಯಾಸವಿದೆ. ಸರ್ಕಾರದ ಹುಕುಂನಲ್ಲಿರತಕ್ಕಂಥ ಳನೇ ಮತ್ತು ೫ನೇ ಕಲಂಗಳನ್ನು ತಾವು ಸ್ವಲ್ಪ ಓದಿದರೆ ತಮಗೆ ಅರ್ಥವಾಗುತ್ತದೆ. They are suffering form incurable disease which are contageous and they are completely blind ಎನ್ನತಕ್ಕಂಥ ಸರ್ಟಿಫಿಕೇಟ್‌ನ್ನು ಡಿಸ್ಪ್ರಿಕ್ಟ್ ಸರ್ಜನ್ ಅವರು ಯಾರ ಯಾರ ಬಗ್ಗೆ ಕೊಡುತ್ತಾರೋ ಅಂತಹವರನ್ನು ಬಿಡುಗಡೆ ಮಾಡಲು ಸರ್ಕಾರ ಸಿದ್ಧವಾಗಿದೆ. ಡಿಸ್ಪ್ರಿಕ್ಟ್ ಸರ್ಜನ್ ಅವರು ಸರ್ಟಿಫಿಕೇಟ್ ಕೊಡುವಾಗ ಅದರಲ್ಲಿ ಇನ್‌ಕ್ಯೂರಬಲ್ ಮತ್ತು ಕನ್‌ಟೇಜಿಯಸ್ ಎಂಬ ಪದಗಳನ್ನು ಸೇರಿಸಿದ್ದರೆ ಬಿಡುಗಡೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ,

ಶ್ರೀ ಟಿ. ಆರ್. ಶಾಮಣ್ಣ.—ಕೆಲವು ಕೇಸನ್‌ನಲ್ಲಿ ೬ ಇಂಚ್ ವರೆಗೆ ಆಪರೇಷನ್ ಆಗಿ ನರಳಂತ್ತಿದ್ದಾರೆ ಇಲ್ಲಿ ಪೆದ್ದಣ್ಣ ಎಂಬುವನ ಕಣ್ಣು ಕಾಣಿಸದೇ ಇರುವುದರಿಂದ, ಅವನಿಗೆ ಔಷಧ ಕೊಡಿಸಲು ಅಲೀಘರ್‌ಗೆ ಕಳುಹಿಸಿಕೊಡಬೇಕೆಂದು ಡಿಸ್ಪ್ರಿಕ್ಟ್ ಸರ್ಜನ್ ಅವರು ಹೇಳಿದ್ದರೂ ಸಹ ಅವರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ, ಕೇವರು ೫-೬ ವರ್ಷಗಳಿಂದ ಜೈಲಿನಲ್ಲಿದ್ದರೂ ಸಹ ಎರಡು ಮೂರು ವರ್ಷಗಳಿಂದ ಮಾತ್ರ ಇದ್ದಾರೆಂದು ಹೇಳತಕ್ಕಂಥ ಉದಾಹರಣೆಗಳೂ ಸಹ ಇವೆ. ಇಂತಹ ಕೇಸ್‌ಗಳನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕೆ ಹೊರತು ಕಟ್ಟುನಿಟ್ಟಾಗಿ ಕಾನೂನನ್ನು ಜಾರಿಗೊಳಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಇಲ್ಲಿ ಜೈಲಿನಲ್ಲಿ ವಾಸ ಮಾಡುವುದು ಒಂದು ರೀತಿಯ ಶಿಕ್ಷೆಯಾದರೆ ಅಧಮಾನದ ಪ್ರಶ್ನೆಯೂ ಇದರಲ್ಲಿ ಅಡಕವಾಗಿರುತ್ತದೆ. ಆದಕಾರಣ ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುವುದರ ಮೂಲಕ ಇಂತಹವರನ್ನು ಬಿಡುಗಡೆಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚೆನ್ನಬಸಪ್ಪ —ಮಾನವೀಯತೆಯಿಂದ ಮತ್ತು, ಅಭಿಮಾನದಿಂದಲೇ ಇಂತಹ ವರನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಏರ್ಪಾಡು ಮಾಡಿದ್ದು: ಆದರೆ ಮಾನವೀಯಂತೆ ಮತ್ತು ಅಭಿಮಾನವನ್ನು ಪ್ರಯೋಗ ಮಾಡುವಾಗ ವಿಧಿನಿಯಮಗಳನ್ನು ಅನುಸರಿಸಿಯೇ ಮಾಡಬೇಕಾಗುತ್ತದೆ. We want a certificate from a competent authority that he is completely blind. For other people who are suffering from T. B. Cancer etc., the District Surgeon must certify that it is incurable and contageous disease.

ಶ್ರೀ ಕಾಗೋಡು ತಿಮ್ಮಪ್ಪ.—ಆ ರೀತಿ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅವರು ಆ ರೀತಿ ಸರ್ಟಿಫಿಕೇಟ್ ಕೊಟ್ಟಿದ್ದೂ ಬಿಡುಗಡೆ ಮಾಡದಿದ್ದರೆ ಅದು ಸರ್ಕಾರದ ತಪ್ಪಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ —ಸರ್ಟಿಫಿಕೇಟ್ ಕೊಟ್ಟಿದ್ದರೂ ಸಹ ಬಿಡುಗಡೆ ಮಾಡಿಲ್ಲ ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ ಅವರು ಸರ್ಟಿಫಿಕೇಟ್ ಕೊಡದಿದ್ದರೆ ನಾನು ಇಷ್ಟೆಂದು ಒತ್ತಾಯ ಮಾಡುತ್ತಿರಲಿಲ್ಲ ಮಂತ್ರಿಯಾಗಿ ಇಂತಹವರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನವೀಯತೆ ದೃಷ್ಟಿ ಇರಬೇಕಾಗುತ್ತದೆ, ಆಲ್ಲವೆ ಇಂತಹವರ ಬಗ್ಗೆ ಡಿಫೈನೇಷನ್ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ಸದಸ್ಯರು ನಿರ್ದಿಷ್ಟ ನಿದರ್ಶನ ಏನಾದರು ಈ ಬಗ್ಗೆ ಇದ್ದರೆ, ಅದನ್ನು ನಮಗೆ ಕಳುಹಿಸಿಕೊಟ್ಟರೆ ಆ ಬಗ್ಗೆ ವಿಚಾರ ಮಾಡಲು ನಮಗೆ ಅನುಕೂಲವಾಗುತ್ತದೆ. ಇಂತಹ ಕೇಸ್‌ಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕೆಂಬ ಇಚ್ಛೆ ನಮಗೆ ಇದ್ದರೂ ಸಹ ಪ್ರೊಸೀಜರ್ ಅನುಸರಿಸಿದೆ ಮಾಡಬೇಕಾಗಿದೆ ಮಾಡುವುದು ಕಷ್ಟವಾಗುತ್ತದೆ. ಆದರೆ ತಮ್ಮ ಹತ್ತಿರ ಅಂತಹ ನಿದರ್ಶನ ಏನಾದರು ಇದ್ದರೆ ನಮಗೆ ಕಳುಹಿಸಿಕೊಡಿ, ಅದರಲ್ಲಿ ತಪ್ಪಿದ್ದರೆ ಸರಿಪಡಿಸುತ್ತೇವೆ, ತಪ್ಪಿಲ್ಲವಿದ್ದರೆ ಅದು ಇದ್ದಂತೆ ಇರುತ್ತದೆ. We have no intention to discriminate between any body.

2-00 P. M.

MATTER UNDER RULE 312

(*ii*) *Re : Coersine method for implementing the Karnataka Debt Relief Act.*

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) —ಮಾನ್ಯ ಅಧ್ಯಕ್ಷರೇ, ಈ ಋಣ ಪರಿಹಾರ ಕಾನೂನು ಜಾರಿಗೆ ಬಂದನೇಲೆ ಒಂದು ವಿಶೇಷವಾದ ವಾತಾವರಣ ಉಂಟಾಗಿದೆ. ಇದರಲ್ಲಿ ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್ ಹಾಗೂ ತಹಸಿಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಯಾರು ಬೇಕಾದರೂ ಆ ಕಾಯಿದೆಯನ್ನು ಜಾರಿಗೆ ಕೊಡಲು ಹೋಗಬಹುದು ಮತ್ತು ಯಾರ ಮನೆಯನ್ನು ಬೇಕಾದರೂ ನುಗ್ಗಬಹುದು. ಈ ರೀತಿಯಾದ ಪರಿಣಾಮವುಂಟಾಗಿದೆ. ಈ ಕಾನೂನಿನಲ್ಲಿ ಕೆಲವು ನಿಯಮಗಳನ್ನು ಶಾಸನಗಳನ್ನು ಮುಂಜೂರು ಮಾಡಬೇಕಾಗಿ ಆಳವಡಿಸಿದ್ದೇವೆ. ಅವನ್ನು ಅಸಿಸ್ಟೆಂಟ್ ಕಮಿಷನರ್ ವಿಚಾರಣೆ ನಡೆಸಿ ಅದರಲ್ಲಿ ಎಷ್ಟು ನಿಜ ಮತ್ತು ಸುಳ್ಳು ಎಂದು ತಿಳಿದು ಬಂದದೇಲೆ ಅವರು ಆಜ್ಞೆ ಕೊಡಬೇಕು ಅದನ್ನು ಅನುಸರಿಸಿ ಜಾರಿಗೆ ಕೊಡಬೇಕು. ಇದನ್ನು ಸ್ಪಷ್ಟವಾಗಿ ಉಲ್ಲೇಖಮಾಡಿದ್ದೇವೆ. ಆದರೆ ಈಗ ನಮ್ಮ ರಾಜ್ಯದಲ್ಲಿ ವಾಸ್ತವಿಕವಾಗಿ ನಡೆಯುತಕ್ಕಂಥಾದ್ದನ್ನು ನೋಡಿದರೆ ಯಾರು ಅರ್ಜಿ ಕೊಟ್ಟರೂ ಕೂಡಲೇ ಆ ಅರ್ಜಿಯ ಆಧಾರದಮೇಲೆ ಯಾರ ಮನೆಯನ್ನಾದರೂ ನುಗ್ಗಿ ಅದು ಯಾವ ವಸ್ತುವೇ ಆಗಿರಲಿ ಅದನ್ನು ಯಾರು ದೂರು ಕೊಡುತ್ತಾರೆ ಅವರಿಗೆ ಕೊಡಿಸುವುದು ಒಂದು ಪದ್ಧತಿಯಾಗಿದೆ. ಅಧ್ಯಕ್ಷರೇ, ನಿಜವಾಗಿ ಹೇಳುವುದಾದರೆ ಯಾರಾದರೂ ಒಂದು ವಸ್ತು ಇಟ್ಟುಕೊಂಡಿದ್ದಾರೆ ಅದರ ಮೇಲೆ ಹಣವನ್ನು ಕೊಟ್ಟಿರುತ್ತಾರೆ ಆ ವಸ್ತುವನ್ನು ಇಟ್ಟುಕೊಂಡು ಹತ್ತಾರು ವರ್ಷವಾದಮೇಲೆ ಅದನ್ನು ಇಟ್ಟುಕೋಂಡಂ ಹಣವನ್ನು ಕೊಟ್ಟವರಂ ಸತ್ತು ಹೋಗಿರುತ್ತಾನೆ ಅವರ ಮಕ್ಕಳಿಗೆ ಈ ವಿಷಯವೇ ಗೊತ್ತಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಯಾವರೀತಿ ಇದನ್ನು ಬಗೆಹರಿಸಬೇಕು ಎನ್ನುವುದನ್ನು ಕೂಡ ವಿವೇಚನೆ ಮಾಡದೆ ಅಧಿಕಾರಿಗಳು ಯಾರಾದರೂ ಬಂದು ನಾನು ಬೆಳ್ಳಿ, ಬಂಗಾರ